# ಜಾನಪದ ಕಲೆಗೆ ಆದ್ಯತೆ ನೀಡಿ: ಬಸವರಾಜ

**ಕುಂದಗೋಳ:** ಜಗತ್ತಿನ ವಿನಾಶದ ಮೊದಲನೇ ಸೂಚನೆ ಎಂದರೆ ಅದು ಮೊಬೈಲ್, ಈ ಮೊಬೈಲ್ ನಿಂದ ಗ್ರಾಮೀಣ ಭಾಗದಲ್ಲಿ ಯುವಕ-ಯುವತಿಯರು ಪಬ್ಜಿಯಂತಹ ಗೇಮ್, ಇತರೆ ವಿಷಯಕ್ಕೆ ಮಾರು ಹೋಗಿ ಸಾಹಿತ್ಯ, ಸಂಗಿತ, ಕಲೆ, ನಾಟಕ, ಇವುಗಳ ಅಭಿರುಚಿ ಕಡಿಮೆ ಆಗಿದೆ. ಇಂತಹ ಅಭಿರುಚಿ ಕಡಿಮೆ ಆಗಬಾರದೆಂಬ ಹಿತದೃಷ್ಟಿಯಿಂದ ಗ್ರಾಮಲೋಕ ಕಾರ್ಯಕ್ರಮನ್ನು ಗ್ರಾಮೀಣ ಭಾಗದಲ್ಲಿ ಹಮ್ಮಿಕೊಂಡಿದ್ದೇವೆ ಎಂದು ನವದೆಹಲಿಯ ಸಾಮಾನ್ಯ ಸಲಹಾ ಸಮಿತಿ, ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಬಸವರಾಜ ಸಾದರ ಹೇಳಿದರು.

ರವಿವಾರ ತಾಲ್ಲೂಕಿನ ಶಿರೂರ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಶಿರೂರ ಗ್ರಾಮ ಪಂಚಾಯತಿ ವತಿಯಿಂದ ಹಮ್ಮಿಕೊಂಡಿದ್ದ ಗ್ರಾಮಲೋಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಸಾಹಿತ್ಯದ ಅಭಿರುಚಿ ಕಡಿಮೆ ಆಗುತ್ತಿದೆ. ಯುವಕರು ಗ್ರಾಮೀಣ ಭಾಗದಲ್ಲಿ ಕಲೆ, ಸಾಹಿತ್ಯ , ಸಂಗೀತ, ಯಕ್ಷಗಾನ, ಬಯಲಾಟ, ದೊಡ್ಡಾಟ, ಜಾನಪದ ಕಲೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.



ಇನ್ನೋರ್ವ ಸಾಹಿತಿ ಹೇಮಾ ಪಟ್ಟಣ ಶೆಟ್ಟಿ ಮಾತನಾಡಿದರು. ಹುಬ್ಬಳ್ಳಿ ಪೋಲಿಸ ಇಲಾಖೆಯ ಸಿಪಿಐ ಜ್ಯೋತಿರ್ಲಿಂಗ ಹೊನಕಟ್ಟಿಯವರು ಜನಪದ ಸಾಹಿತ್ಯ, ಗ್ರಾಮೀಣರ ಹೃದಯದ ದನಿ ಎಂಬ ವಿಷಯದ ಬಗ್ಗೆ ಮಾತನಾಡಿದರು. ಸಾಹಿತಿ ಜಿ.ಎ. ತಿಗಡಿಯವರು ಗ್ರಾಮೀಣ ಜನತೆ ಹಾಗೂ ನೈತಿಕ ಸಾಹಿತ್ಯದ ಬಗ್ಗೆ ಮಾತನಾಡಿದರು. ರಂಗಕಲಾವಿದರಾದ ಬಸವರಾಜ ಬೆಂಗೇರಿಯವರು ಗ್ರಾಮೀಣ ಪರಿಸರದಲ್ಲಿ ರಂಗ ಸಾಹಿತ್ಯದ ಪ್ರಭಾವದ ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಶಿರೂರ ಗ್ರಾಮ ಪಂಚಾಯತಿ ಅಧ್ಯಕ್ಷೆ ನೀಲವ್ವ ಮಾಭಜಪ್ಪನವರ, ಸದಸ್ಯ ಅಶೋಕ ಘೋರ್ಪಡೆ, ಶಿವನಗೌಡ ಗೌಡಪ್ಪಗೌಡ್ರ, ಸುಭಾಸ ಘೋರ್ಪಡೆ, ತಾರಕ್ಕ ಪೂಜಾರ, ಯಲ್ಲಪ್ಪ ಭರಮಕ್ಕನವರ, ರವಿ ಕಮಡೊಳ್ಳಿ, ಯಲ್ಲಪ್ಪಗೌಡ ನಾಗನಗೌಡ್ರ, ಚೇತನ ಗೌಡಪ್ಪಗೌಡ್ರ, ಶೇಖರಗೌಡ ಗೌಡಪ್ಪಗೌಡ್ರ, ನೀಜನಗೌಡ ಪಾಟೀಲ, ಶಂಕ್ರಪ್ಪ ಗುಡಗೇರಿ ಇದ್ದರು.